

# ಗುರು ದ್ರೋಣನ ಮಗ ಅಶ್ವತ್ಥಾಮಂಗೆ ಗುರುವಾಯ್ತು ಕೌಶಿಕನೆಂಬ ಗೂಬೆ!

**ಸಂಜಯ:** ಸೂರ್ಯ ಮುಳುಗುವುದಕ್ಕೆ ಇನ್ನೂ ಹೊತ್ತು ಇತ್ತು. ಅವರು ಮೂರೂ ಜನ ಅಶ್ವತ್ಥಾಮ, ಕೃಪ, ಕೃತವರ್ಮ ಒಟ್ಟಿಗೆ ತೆಂಕಲ ಮೊಗನಾಗಿ ಶಿಬಿರದ ಬಳಿಗೆ ಬಂದರು ರಥದಿಂದ ಕುದುರೆ ಬಿಚ್ಚಿದರು. ಒಂದೇ ಸಮ ಭಯದಲ್ಲೇ ಇದ್ದರು. ದಟ್ಟವಾದ ಅಡಗುದಾಣ ಹೊಕ್ಕಿಕೊಂಡರು.ಮೈಯೆಲ್ಲಾ ಗಾಯ

ಸೇನೆ ಇದ್ದ ಜಾಗದಿಂದ ಸ್ವಲ್ಪ ದೂರದಲ್ಲೇ ಆ ಜಾಗ. ಬಿಸಿಯಾದ ನಿಟ್ಟುಸಿರು ಬಿಡುತ್ತಾ ಕೂತರು.

ಪಾಂಡವರದೇ ಭಯ ಅವರಿಗೆ. ದೂರದಲ್ಲೆಲ್ಲೊ ಪಾಂಡವರ ಜಯ ಘೋಷಣೆ ಕೇಳಿಸಿತು. ಬೆದರಿದರು, ತಿರುಗಿ ಓಡಿದರು. ಮೂಡಣ ದಿಕ್ಕಿನ ಕಡೆಗೆ. ಹೀಗೆ ಗಂಟೆಗಟ್ಟಲೆ ಓಡುತ್ತಲೇ ಇದ್ದರು. ಕುದುರೆ ದಣಿಯಿತು. ಇವರಿಗೂ ನೀರಡಿಸಿತು. ಜತೆಗೆ ಕೋಪ ಹೊಟ್ಟೆ ತುಂಬಾ ಕಿಚ್ಚಿಗೆ ವಶವಾಗಿದಾರೆ ಬೇರೆ. ರಾಜ ವಧೆಯಾದ ಸಂಕಟದಲ್ಲಿ ಸುಮ್ಮನೆ ಕೂತರು.

**ಧೃತರಾಷ್ಟ್ರ:** ನನ್ನ ಮಗ ಸಾವಿರ ಆನೆಯ ಬಲದವನು

ವಜ್ರದ ಮೈಯಪ್ರಾಯದ ಹುಡುಗ

ಅವನೇ ಬಿದ್ದುಹೋದ ಎನ್ನುತೀಯಾ? ಭೀಮ ಅವನನ್ನು ಬೀಳಿಸಿಬಿಟ್ಟ ಎಂದರೆ ನಂಬೋದಕ್ಕೇ ಆಗ್ತಾನೆ ಇಲ್ಲ. ಎಂಥ ಜೀವಿಯೇ ಇರಲಿ

ನನ್ನ ಮಗನನ್ನು ಕೊಲ್ಲುವುದಕ್ಕೆ ಸಾಧ್ಯವಾ?

ಕುಂತಿಯ ಮಕ್ಕಳು ಒಟ್ಟಿಗೆ ಸೇರಿ ನನ್ನ ಮಗನನ್ನು ಬೀಳಿಸಿದರು ಎಂದರೆವಿಧಿಯನ್ನು ಮೀರುವುದು, ಮನುಷ್ಯನಿಗೆ ಸಾಧ್ಯವೇ ಇಲ್ಲ ಅಂತ ಅಷ್ಟೆ. ಇನ್ನೇನಿದೆ?

ನನ್ನ ಗುಂಡಿಗೆ, ನೂರು ಮಕ್ಕಳ ಸಾವು ಕೇಳಿಯೂ

ಈ ನನ್ನ ಗುಂಡಿಗೆ ಚೂರು ಚೂರಾಗದೆ ಇದೆಯಲ್ಲ

ಇದನ್ನು ಬೆಟ್ಟ ಕರಗಿಸಿ ಎರಕ ಹೊಯ್ದಿರಬೇಕು ಕಣೋ ಸಂಜಯ

ಮಗ ಸತ್ತಮೇಲೆ ಈ ಮುದಿಜೋಡಿಗೆ ಗತಿಯೇನಪ್ಪಾ

ನಾನು ರಾಜ ರಾಜನಿಗೆ ಅಪ್ಪನಾಗಿದ್ದವನು ಕಣೋ. ಜಗತ್ತಿನ ನೆತ್ತಿಯ ಮೇಲೆ ಕೂತು ಜಗತ್ತಿಗೇ ಅಪ್ಪಣೆ ಮಾಡತಿದ್ದೆ. ಪಾಂಡವರ ಚಾಕರಿ ಮಾಡುತ್ತಾ ಅವರು ಹೇಳಿದಂತೆ ನಡೆದುಕೋಬೇಕಾ. ಈ ದುರಂತ ನಾನೇ ತಂದುಕೊಂಡಿದ್ದು. ಬೇರೆಯವರ ಜೀತಗಾರ ಆಗಿಬಿಟ್ಟೆನಲ್ಲಾ. ನನ್ನ ನೂರು ಜನ ಮಕ್ಕಳನ್ನ ಕೊಂದು ಹಾಕಿದಾನೆ ಆ ಭೀಮ. ಅವನ ಮಾತು ಸಹಿಸಿಕೊಳ್ಳಲಾರೆ ಕಣೋ ಸಂಜಯಾ! ನನ್ನ ಮಗನನ್ನು ಅನ್ಯಾಯದಲ್ಲಿ ಕೊಂದುಬಿಟ್ಟರು. ಆಗ ಅಶ್ವತ್ಥಾಮ ಕೃಪ ಕೃತವರ್ಮ ಎಲ್ಲಾ ಏನು ಮಾಡಿದರು?

**ಸಂಜಯ:** ನಿನ್ನವರು ಓಡಿದರು

ಸ್ವಲ್ಪ ದೂರ ಹೋದ ಮೇಲೆ ಥರಾವರಿ ಮರ ಬಳ್ಳಿ ತುಂಬಿಕೊಂಡು ಘೋರವಾಗಿದ್ದ ಕಾಡು ಕಾಣಿಸಿತು. ಕುದುರೆಗೆ ದಾಹ ಹಿಂಗಿಸಿ ನೀರು ಕುಡಿಸಿ ಕೆಲಕಾಲ ದಣಿವಾರಿಸಿಕೊಂಡರು.

ಸೂರ್ಯ ಮುಳುಗುವ ಹೊತ್ತಾಯಿತು. ಮುಂದೆ ಹೊರಟರು: ದಟ್ಟವಾದ ಕಾಡಿನ ಒಳಕ್ಕೆ.

ಎದುರಿಗೆ ಸಾವಿರಾರು ಕೊಂಬೆ ಚಾಚಿಕೊಂಡ ಒಂದು ಆಲದ ಮರ ಕಾಣಿಸಿತು.

ದ್ವಿಪದಿಗಳಲ್ಲೇ ಶ್ರೇಷ್ಠರಾದ ಆ ಮಹಾರಥರು ಆ ವನಸ್ಪತಿಯ ಬಳಿಗೆ ಬಂದರು.

ರಥದಿಂದ ಕುದುರೆ ಬಿಚ್ಚಿದ್ದರು. ಆ ಹೊತ್ತಿಗೆ ತಕ್ಕ ಹಾಗೆ ನೀರು ಮುಟ್ಟಿದರು.

ಬೆಟ್ಟದ ಬೆನ್ನು ಹಿಡಿದು ಸೂರ್ಯ ಮುಳುಗಿದ. ಜಗತ್ತಿನ ಸಕಲದ ಮೇಲೂ ಕತ್ತಲು ತುಂಬಿಕೊಂಡಿತು. ಗ್ರಹ, ನಕ್ಷತ್ರ, ತಾರೆಗಳಿಂದ ಸಿಂಗಾರಗೊಂಡ ಆಕಾಶ ರಾತ್ರಿಯ ಮುಖಕ್ಕೆ ತೆಳು ಪರದೆ ಹಾಕಿದಹಾಗಿತ್ತು.

ಹಗಲು ಎಚ್ಚರದ ಪ್ರಾಣಿಗಳು ನಿದ್ದೆಗೆ ವಶವಾದವು. ನಿಶಾಚರಿಗಳು ಎದ್ದು ಆಸೆ ತುಂಬಿಕೊಂಡುಅತ್ತಿತ್ತ ಓಡಾಡಿದವು. ರಾತ್ರಿಂಚರಗಳ ಕರುಳು ದಾರುಣವಾಗಿ ಕೂಗಿಕೊಂಡಿತು ರಾಕ್ಷಸರು ಖುಷಿಯಾದರು. ರಾತ್ರಿ ಘೋರವಾದಳು.

ಇನ್ನೂ ಮೊದಲ ಜಾವ. ಘನ ಘೋರವಾಗಿತ್ತು ರಾತ್ರಿ. ಕೃಪ, ಕೃತವರ್ಮ, ಅಶ್ವತ್ಥಾಮ ಮೂವರೂ ಒಂದೇ ಸಮ ಸಂಕಟ ತುಂಬಿಕೊಂಡು ಆ ಆಲದ ಮರದ ಹತ್ತಿರ ಕೂತು ಶೋಕ ಮಾಡುತ್ತಾ ಇದ್ದರು. ಅವರ ಮನಸ್ಸನ್ನೆಲ್ಲಾ ಪಾಂಡವರ ನಾಶವೇ ಆವರಿಸಿಕೊಳ್ಳುತ್ತಿತ್ತು. ನಿದ್ದೆ ಅವರ ಮೈಯಲ್ಲಿ ಬಳಸು ಹಾಕುತ್ತಿತ್ತು. ಹಾಗೇ ನೆಲಕ್ಕೊರಗಿದರು. ಮೈಯ ತುಂಬ ಗಾಯ. ಜತೆಗೆ ದಣಿವು. ಸುಖವಾಗಿದ್ದವರು, ಸುಖಕ್ಕೆ ಯೋಗ್ಯರಾದವರು, ನೆಲದ ಮೇಲೆ ಬಿದ್ದುಕೊಂಡರು. ಆ ದಣಿವು ಶೋಕದಿಂದಲೇ ನಿದ್ದೆ ಬಂತು. ತಬ್ಬಲಿಗಳ ಹಾಗೆ ನೆಲದಲ್ಲೊರಗಿದರು. ನಿದ್ದೆ ಮಾಡುತ್ತಿದ್ದರೂ ಕೋಪ, ಹೊಟ್ಟೆಯ ಕಿಚ್ಚು ಹೋಗಿರಲಿಲ್ಲ ಅವರಿಗೆ.

ದ್ರೋಣನ ಮಗ ಅಶ್ವತ್ಥಾಮ ಹಾವಿನ ಹಾಗೆ ಬುಸುಗುಡುತ್ತಿದ್ದ. ಆ ಕೋಪದಿಂದ ಸರಿಯಾಗಿ ನಿದ್ದೆ ಹತ್ತಲಿಲ್ಲ. ಆ ಭೀಕರವಾದ ಕಾಡನ್ನೆಲ್ಲ